# ೧೦.೧೨.೨೦೧೨ರಂದು ನಡೆದ ಪ್ರಶಾಸನ ಸಮಿತಿ ೧೦ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೧೦ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಡಿಸೆಂಬರ್ ೧೦, ೨೦೧೨ರ ಸೋಮವಾರ ಬೆಳಿಗ್ಗೆ ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ** ಮಳಗಿ, ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೮. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೯. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಒಂಭತ್ತನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 09.11.2012ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಒಂಭತ್ತನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 4, 5 ಮತ್ತು 6**ಕ್ಕೆ ಸಂಬಂಧಿಸಿದಂತೆ ದಿನಾಂಕ: 09.11.2012ರ ಶುಕ್ರವಾರ ನಡೆದ ಪ್ರಥಮ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಕ್ರಮವಹಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಗಮನಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: ಪ್ರಥಮ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ಖರ್ಚು ಮಾಡಲಾದ ಮೊತ್ತಕ್ಕೆ ಅನುಮೋದನೆ ಪಡೆಯುವುದರ ಬಗೆಗೆ.**

ಟಿಪ್ಪಣಿ: ದಿನಾಂಕ: 09.11.2012ರ ಶುಕ್ರವಾರ ರಾಜಭವನದ ಗಾಜಿನಮನೆಯಲ್ಲಿ ನಡೆಸಲಾದ ಪ್ರಥಮ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ಒಟ್ಟಾರೆ **ರೂ. 4,86,670/–**ಗಳನ್ನು ಖರ್ಚು ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ವಿವರ | ಮೊತ್ತ |
|---|---|---|
| 01. | ಎಂ.ಎ. ವಿದ್ವದುತ್ತಮಾ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರದ ಬಾಬ್ತು | 60,000–00 |

| | | |
|---|---|---|
| 02. | ಮೂರು ಪುಸ್ತಕಗಳ ಮುದ್ರಣ ಬಾಬ್ತು (ಗೌರವ ಡಿ.ಲಿಟ್ ಪುರಸ್ಕೃತರ ಪರಿಚಯ ಪುಸ್ತಿಕೆ; ಕುಲಪತಿಗಳ ಸ್ವಾಗತ ಭಾಷಣ ಮತ್ತು ದೀಕ್ಷಾಂತ ಘಟಿಕೋತ್ಸವ ಭಾಷಣ) | 42,527–00 |
| 03. | ವೇದಿಕೆ ಸಿದ್ಧತೆ, ಧ್ವನಿವರ್ಧಕ, ಶಾಮಿಯಾನ, ಕುರ್ಚಿಗಳು, ಹೂವಿನ ಅಲಂಕಾರ ಇನ್ನಿತರ ಸೌಲಭ್ಯದ ಬಾಬ್ತು | 68,000–00 |
| 04. | ಸಮಾರಂಭದಲ್ಲಿ ಗಣ್ಯರನ್ನು ಸತ್ಕರಿಸಲು ಸರಸ್ವತಿ ಮತ್ತು ಗಣೇಶನ ಕಂಚಿನ ಲೋಹದ ಪ್ರತಿಮೆಗಳನ್ನು ಮಾಡಿಸಿದ ಬಾಬ್ತು | 86,299–00 |
| 05. | ಆಮಂತ್ರಣ ಪತ್ರಿಕೆಗಳ ಮುದ್ರಣದ ಬಾಬ್ತು | 52,750–00 |
| 06. | ಅತಿಥಿಗಳ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಮಧ್ಯಾಹ್ನದ ಊಟ ಹಾಗೂ ಇತರೆ ಸಾಂದರ್ಭಿಕ ವೆಚ್ಚ | 58,000–00 |
| 07. | ಲೆದರ್‌ಬ್ಯಾಗ್, ಕ್ಯಾರಿಬ್ಯಾಗ್, ಗೌರವ ಡಾಕ್ಟರೇಟ್ ನೆನಪಿನ ಫಲಕ, ಪೇಟಗಳು ಮತ್ತು ಶಾಲುಗಳನ್ನು ಖರೀದಿಸಿದ ಬಾಬ್ತು | 78,099–00 |
| 08. | ಬಾಡಿಗೆ ವಾಹನಗಳ ವೆಚ್ಚ | 8,595–00 |
| 09. | ಸಮಾರಂಭದ ಛಾಯಾಚಿತ್ರಗಳ ಅಂದಾಜು ಬಾಬ್ತು | 25,000–00 |
| 10. | ಶಲ್ಯಗಳನ್ನು ಖರೀದಿಸಿದ ಬಾಬ್ತು | 7,400–00 |
| | **ಒಟ್ಟು ವೆಚ್ಚ** | **4,86,670–00** |

ದಿನಾಂಕ: 16.05.2012ರಂದು ನಡೆದ ಪ್ರಶಾಸನ ಸಮಿತಿ 4ನೇ ಸಭೆಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯ ಸಂಖ್ಯೆ: 13ರಲ್ಲಿ **5.00 ಲಕ್ಷ ರೂ.**ಗಳಿಗೆ ಅನುಮೋದನೆ ಪಡೆಯಲಾಗಿತ್ತು. ಈ ಸಮಾರಂಭಕ್ಕೆ ತಗುಲಿದ ಒಟ್ಟಾರೆ ವೆಚ್ಚ **ರೂ. 4,86,670/–**ಗಳಿಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಸಮಗ್ರವಾಗಿ ಪರಿಶೀಲಿಸಿ ಒಟ್ಟು ವೆಚ್ಚಕ್ಕೆ ಅನುಮೋದನೆಯನ್ನು ನೀಡಿತು.**

**ವಿಷಯ 3: ವಿವಿಧ ಪತ್ರಿಕೆಗಳಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಹೀರಾತು ಪ್ರಕಟಿಸಿದ ಬಾಬ್ತು ರೂ. 48,000/–ಗಳನ್ನು ಪಾವತಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯಕ್ರಮಗಳ ವಿವರಗಳನ್ನೊಳಗೊಂಡ ಜಾಹೀರಾತುಗಳನ್ನು ಈ ಕೆಳಗಿನಂತೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ.

- ಪ್ರಸಿದ್ಧ ಸಂಸ್ಕೃತ ಮಾಸಪತ್ರಿಕೆ **'ಸಂಭಾಷಣ ಸಂದೇಶಃ'**ದ 2012ರ ಆಗಸ್ಟ್ ಸಂಚಿಕೆಯ ಹಿಂಬದಿ ರಕ್ಷಾಪುಟದಲ್ಲಿ ಒಂದು ಪೂರ್ಣ ಪುಟ(1/4 ಡೆಮಿ ಅಳತೆ)ದ ನಾಲ್ಕುವರ್ಣಗಳ ಜಾಹಿರಾತು ಪ್ರಕಟಿಸಲಾಗಿದೆ. (ಜಾಹಿರಾತು ಬಾಬ್ತು ರೂ. 10,000/–)
- ಮೈಸೂರಿನಿಂದ ಪ್ರಕಟಗೊಳ್ಳುತ್ತಿರುವ **'ಸುಧರ್ಮಾ'** ಸಂಸ್ಕೃತ ದಿನಪತ್ರಿಕೆಯ 43ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಕಟಿಸಿದ ವಿಶೇಷ ಸಂಚಿಕೆ(1/4 ಡೆಮಿ ಅಳತೆ)ಯ ಹಿಂಬದಿ ಒಳರಕ್ಷಾಪುಟದಲ್ಲಿ ನಾಲ್ಕುವರ್ಣಗಳ ಪೂರ್ಣಪುಟದ ಜಾಹೀರಾತನ್ನು ಪ್ರಕಟಿಸಲಾಗಿದೆ. (ಜಾಹಿರಾತು ಬಾಬ್ತು ರೂ. 10,000/–)
- ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ (ರಿ.)ದ 5ನೇ ರಾಷ್ಟ್ರೀಯ ಅಧಿವೇಶನ ಮತ್ತು ಬೆಳ್ಳಿಹಬ್ಬದ ಸಂದರ್ಭದಲ್ಲಿ ಪ್ರಕಟಿಸಿದ **'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'**ದ ವಿಶೇಷ ಸಂಚಿಕೆಯಲ್ಲಿ ಪೂರ್ಣಪುಟದ ಕಪ್ಪು–ಬಿಳುಪಿನ ಜಾಹಿರಾತನ್ನು ಪ್ರಕಟಿಸಲಾಗಿದೆ. (ಜಾಹಿರಾತು ಬಾಬ್ತು ರೂ. 25,000/–)
- ಏಳನೆಯ ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಲನ ಸಂದರ್ಭದಲ್ಲಿ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್‌ನವರು **'ಸಂಸ್ಕೃತ ತರಂಗಿಣೀ'** ವಿಶೇಷಾಂತವನ್ನು ಪ್ರಕಟಿಸಿದ್ದು, ಈ ವಿಶೇಷಾಂಕದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಒಂದು ಪುಟ (ಸಾಮಾನ್ಯ ಪುಟ)ದ ಜಾಹಿರಾತನ್ನು ಪ್ರಕಟಿಸಲಾಗಿದೆ. (ಜಾಹಿರಾತು ಬಾಬ್ತು ರೂ. 3,000/–)

ಮೇಲಿನಂತೆ ಜಾಹೀರಾತುಗಳನ್ನು ಪ್ರಕಟಿಸಿದ ಬಾಬ್ತು **ಒಟ್ಟು ರೂ. 48,000/–**ಗಳನ್ನು ಪಾವತಿಸಲಾಗಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಿವಿಧ ಸಂಸ್ಕೃತ ಪತ್ರಿಕೆಗಳಲ್ಲಿ ಹಾಗೂ ವಿಶೇಷ ಸಂಚಿಕೆಗಳಲ್ಲಿ ಪ್ರಕಟಗೊಂಡ ಜಾಹೀರಾತುಗಳ ವಿವರಗಳನ್ನು ಪರಿಶೀಲಿಸಿತು. ಒಟ್ಟು ವೆಚ್ಚ ರೂ. 48,000/–ಗಳಿಗೆ ಅನುಮೋದನೆಯನ್ನು ನೀಡಿತು.**

**ವಿಷಯ 4: ರಾಜ್ಯ ವೇತನಶ್ರೇಣಿ ಬೋಧಕೇತರ 'ಡಿ' ವರ್ಗದ ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಡಿ' ವರ್ಗದ ಹುದ್ದೆಗೆ 10 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ದಿನಾಂಕ: **2012ರ ಡಿಸೆಂಬರ್ 6 ಮತ್ತು 7ರಂದು** ರಾಜ್ಯ ವೇತನಶ್ರೇಣಿಯ ಬೋಧಕೇತರ

**'ಗ್ರೂಪ್ ಡಿ'** (ಜವಾನ/ಕಾವಲುಗಾರ) ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ನಡೆಸಲಾಯಿತು. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ರಾಜ್ಯ ವೇತನಶ್ರೇಣಿಯ ಬೋಧಕೇತರ ಗ್ರೂಪ್ 'ಡಿ' ಹುದ್ದೆಗಳಿಗೆ ದಿನಾಂಕ: 06 ಮತ್ತು 07, ಡಿಸೆಂಬರ್ 2012ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

| ಕ್ರಸಂ. | ಹುದ್ದೆಯ ಪದನಾಮ | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|---|
| **01.** | ಜವಾನ | **ಶ್ರೀಶೈಲ ನಿಂಗಪ್ಪ ಲೋಣಿ**<br>ತಂದೆ ನಿಂಗಪ್ಪ<br>ವರ್ಷಾನಿಲಯ, ಫ್ಲಾಟ್ ನಂ. 81/82,<br>ಪ್ರಬುದ್ಧ ನಗರ, ವಿಶ್ವವಿದ್ಯಾಲಯ ಹಿಂಭಾಗ<br>ಕುಸನೂರ ರಸ್ತೆ, ಗುಲ್ಬರ್ಗಾ | ಪರಿಶಿಷ್ಟ ಜಾತಿ |
| **02.** | ಜವಾನ | **ರೇವಣ್ಣ ಎಸ್.ಬಿ.**<br>ತಂದೆ ಬಸವಯ್ಯ ಕೆ.<br>ಸೂಲಿಕೆರೆ, ಸೂಲಿಕೆರೆ ಅಂಚೆ<br>ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾ::<br>ಬೆಂಗಳೂರು – 560060 | ಸಾಮಾನ್ಯ |
| **03.** | **ಕಾವಲುಗಾರ** | – | ಪರಿಶಿಷ್ಟ ಪಂಗಡ |
| **04.** | ಜವಾನ | **ತುಳಸಿ ಎನ್.ಎಲ್.**<br>W/o. ನಾಗೇಗೌಡ<br>ಕೇರಾಫ್ ರಮೇಶ್ ಬಿಲ್ಡಿಂಗ್<br>ಚಾಮುಂಡೇಶ್ವರಿ ನಗರ, ಎಸ್.ಬಿ.ಎಂ. ಸ್ಕೂಲ್<br>ಮುಂಭಾಗ, ಲಗ್ಗೆರೆ, ಬೆಂಗಳೂರು–560 058 | ಸಾಮಾನ್ಯ (ಮಹಿಳೆ) |
| **05.** | ಜವಾನ | **ಟಿ. ಉಮಾ**<br>W/o. ಗಂಗಾಧರ<br>ನಂ. 887, 4ನೇ ಕ್ರಾಸ್, 2ನೇ ಮುಖ್ಯರಸ್ತೆ<br>ಲಗ್ಗೆರೆ, ಬೆಂಗಳೂರು–560 058 | ಪ್ರವರ್ಗ–1 (ಮಹಿಳೆ) |
| **06.** | **ಕಾವಲುಗಾರ** | **ಮಂಜುನಾಥ ಕೋಟಿ**<br>ಜೋಡಳ್ಳಿ ಮುಕ್ಕಾಂ ಮತ್ತು ಅಂಚೆ<br>ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ–580 114 | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) |
| **07.** | ಜವಾನ | **ಶ್ರೀನಿವಾಸಮೂರ್ತಿ**<br>ತಂದೆ ವೆಂಕಟಪ್ಪ<br>ತಣ್ಣೀನಹಳ್ಳಿ, ಎ. ವೆಂಕಟಾಪುರ ಅಂಚೆ, ಕೊರಟಗೆರೆ ತಾಲ್ಲೂಕು,<br>ತುಮಕೂರು ಜಿಲ್ಲೆ | ಪ್ರವರ್ಗ 2ಎ |
| **08.** | ಜವಾನ | **ಶಶಿಧರ ಹೆಚ್.**<br>ತಂದೆ ಹೊನ್ನಪ್ಪ ಎಸ್.<br>ಮೈಲನಹಳ್ಳಿ ಬಡಕುಂಟೆ ಅಂಚೆ<br>ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ–562 127 | ಸಾಮಾನ್ಯ (ಅಂಗವಿಕಲ ಅಭ್ಯರ್ಥಿ) |
| **09.** | ಜವಾನ | **ಸವಿತ ಬಿ.ಜೆ.**<br>ಕೇರಾಫ್ ವೆಂಕಟೇಶ್<br>ನಂ. 139/2, ಶಿವನಪಾಳ್ಯ (ವಡ್ಡರಪಾಳ್ಯ)<br>ಕೆ.ಎಚ್.ಬಿ. ಕಾಲೋನಿ ಹತ್ತಿರ<br>ಕೆಂಗೇರಿ ಉಪನಗರ, ಬೆಂಗಳೂರು–560 060 | ಪರಿಶಿಷ್ಟ ಜಾತಿ (ಮಹಿಳೆ) |
| **10.** | ಜವಾನ | **ಪ್ರಸನ್ನಕುಮಾರ ಪಿ.**<br>ಪುಟ್ಟೇಗೌಡ, ಯಲಿಯೂರು ಗ್ರಾಮ, ವೈ.ಟಿ. ಹಳ್ಳಿ ಅಂಚೆ,<br>ವಿರೂಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ತಾ.<br>ರಾಮನಗರ ಜಿಲ್ಲೆ, 562138 | ಸಾಮಾನ್ಯ |
| **11.** | **ಕಾವಲುಗಾರ** | – | ಪ್ರವರ್ಗ 2ಬಿ |
| **12.** | **ಕಾವಲುಗಾರ** | **ರಂಗಸ್ವಾಮಿ ಆರ್.**<br>ನಂ. 05, ಎಂ.ಜಿ. ಪಾಳ್ಯ, ತಡಕಲೂರು (ಅಂಚೆ)<br>ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ | ಸಾಮಾನ್ಯ (ಗ್ರಾಮೀಣ ಅಭ್ಯರ್ಥಿ) |

**ಕಾವಲುಗಾರ ಎರಡು ಹುದ್ದೆಗಳಿಗೆ ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ 2ಬಿ ಅಭ್ಯರ್ಥಿಗಳಿಂದ ಅರ್ಜಿಗಳು ಸಲ್ಲಿಸದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ಮೇಲ್ಕಂಡ ಆಯಾಯ ಹುದ್ದೆಗಳಿಗೆ ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.**

**ವಿಷಯ 5: ಯುಜಿಸಿ ವೇತನಶ್ರೇಣಿಯ ಬೋಧಕ (ಪ್ರಾಧ್ಯಾಪಕ) ಹುದ್ದೆ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 2012ರ ಜೂನ್ 16ರಂದು ನಡೆದ ಪ್ರಶಾಸನ ಸಮಿತಿಯ 5ನೇ ಸಭೆಯ ನಿರ್ಣಯದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ನಡೆಯುತ್ತಿದೆ. ಅಂತೆಯೇ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಬೇಕಾದ ಸಮಸ್ತ ವಿವರಗಳ ಸಹಿತ ಮುಂದಿನ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸಲಾಗಿತ್ತು. ಅದರಂತೆ, ಪ್ರಶಾಸನ ಸಮಿತಿ ಮತ್ತು ಪ್ರಶಿಕ್ಷಣ ಪರಿಷತ್ತಿನಲ್ಲಿ ಅನುಮೋದನೆಗೊಂಡ ಯುಜಿಸಿ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಈಗಾಗಲೇ ಸರ್ಕಾರದಿಂದ ಅನುಮೋದನೆಗೊಂಡಿರುವ ತುಮಕೂರು ವಿಶ್ವವಿದ್ಯಾಲಯದ ಯುಜಿಸಿ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿ ಪರಿನಿಯಮದ ಅನ್ವಯ **ಯುಜಿಸಿ ವೇತನಶ್ರೇಣಿಯ 03 (ಮೂರು) ಪ್ರಾಧ್ಯಾಪಕ ಹುದ್ದೆ**ಗಳ ನೇಮಕಾತಿ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮದ ಅನುಸಾರ ಅಧಿಸೂಚನೆ ಹೊರಡಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಯುಜಿಸಿ ಹಾಗೂ ರಾಜ್ಯ ಸರ್ಕಾರದ ನಿಯಮಗಳನ್ನು ಗಮನಿಸಿ ಅಧಿಸೂಚನೆ ಹೊರಡಿಸಿ ಜಾಹಿರಾತಿನ ಮೂಲಕ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು